

‘ದಿ ವಿಲನ್’ ಚಿತ್ರದಲ್ಲಿ ಆ್ಯಮಿ ಜಾಕ್ಸನ್ ಜೊತೆ ಸುದೀಪ್

ಯಶಸ್ಸಲ್ಲ. ಮಹೇಶ್‌ಕುಮಾರ್ ನಿರ್ದೇಶನದ ‘ಅಯೋಗ್ಯ’ ಹಾಗೂ ಜನಾರ್ದನ್ ಚಿಕ್ಕಣ್ಣ ನಿರ್ದೇಶನದ ‘ಗುಲ್ಟು’ ಚಿತ್ರಗಳು ಸಮಾಧಾನಕರ ಎನ್ನಬಹುದಾದ ಗೆಲುವನ್ನು ಸಾಧಿಸಿವೆ. ಈ ಸಾಲಿಗೆ ರಿಷಬ್ ಶೆಟ್ಟಿ ನಿರ್ದೇಶನದ ‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು’ ಚಿತ್ರವನ್ನೂ ಸೇರಿಸಿದರೆ ಐದು ಬೆರಳು ಮಡಚುವ ವೇಳೆಗೆ ಗೆಲುವಿನ ಲೆಕ್ಕ ಮುಗಿಯುತ್ತದೆ. ಅಂದರೆ, ಈ ವರ್ಷದ ಯಶಸ್ಸಿನ ಪ್ರಮಾಣ ಶೇ. 3ಕ್ಕಿಂತಲೂ ಕಡಿಮೆ.

ಒಂದೆಡೆ ಚಿತ್ರರಂಗ ಯಶಸ್ಸಿನ ರಕ್ತಹೀನತೆಯಿಂದ ಬಳಲುತ್ತಿದ್ದರೆ, ಇನ್ನೊಂದೆಡೆ ಸಿನಿಮಾ ನಿರ್ಮಾಣ ಸಣ್ಣಪುಟ್ಟ ನಿರ್ಮಾಪಕರಿಗೆ ಕೈಗೆಟುಕದಷ್ಟು ದುಬಾರಿ ಬಾಬತ್ತಾಗಿ ಪರಿಣಮಿಸಿದೆ. ತಾರಾ ವರ್ಚಸ್ಸಿನ ನಟರ ಸಿನಿಮಾಗಳ ನಿರ್ಮಾಣದ ವೆಚ್ಚ 15ರಿಂದ 20 ಕೋಟಿ ರೂಪಾಯಿಗಳ ವ್ಯವಹಾರವಾಗಿ ಬದಲಾಗಿದೆ. ಒಟ್ಟಾರೆ, ಒಂದು ಚಿತ್ರಕ್ಕೆ 2 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಎಂದು ಅಂದಾಜು ಮಾಡಿದರೂ ಕನಿಷ್ಠ 450 ಕೋಟಿ ರೂಪಾಯಿ ಬಂಡವಾಳವನ್ನು 2018ರಲ್ಲಿ ಚಿತ್ರಗಳ ನಿರ್ಮಾಣಕ್ಕೆ ತೊಡಗಿಸಲಾಗಿದೆ. ತೆರೆಕಾಣಬೇಕಾದ ಚಿತ್ರಗಳ ಸಂಖ್ಯೆಯನ್ನೂ ಲೆಕ್ಕಕ್ಕೆ ಹಿಡಿದರೆ ಈ ಪ್ರಮಾಣ 550ರಿಂದ 600 ಕೋಟಿ ಮುಟ್ಟಬಹುದು. ಇಷ್ಟೊಂದು ಬೃಹತ್ ಪ್ರಮಾಣದ ಹಣದ ವಹಿವಾಟು ನಡೆದ ವರ್ಷದಲ್ಲಿ ಶೇ. 3ರ ಆಸುಪಾಸಿನ ಯಶಸ್ಸು ಚಿತ್ರೋದ್ಯಮಕ್ಕೆ ದೊಡ್ಡ ಪೆಟ್ಟೆನ್ನುವುದನ್ನು ಹೇಳಲಿಕ್ಕೆ ಅರ್ಥಶಾಸ್ತ್ರದ ಅಗತ್ಯವೇನೂ ಇಲ್ಲ.

ವಾರಕ್ಕೆ ಮೂರ್ನಾಲ್ಕು ಸಿನಿಮಾಗಳು ತೆರೆಕಾಣುವುದು ಸಹಜ ಎನ್ನುವಂತಿದ್ದ 2018ರಲ್ಲಿ, ಕೆಲವು ವಾರ ಆರೇಳು ಸಿನಿಮಾಗಳು ಒಮ್ಮೆಗೇ ತೆರೆಕಂಡು ‘ಕಾಣದಂತೆ ಮಾಯವಾದ’ ಉದಾಹರಣೆಗಳೂ ಇದ್ದವು. ಒಂದು ವಾರವಂತೂ ಹನ್ನೊಂದು ಸಿನಿಮಾ ತೆರೆಕಂಡವು. ಹೀಗೆ ಹೊಸಚಿತ್ರಗಳ ಪರೇಡ್ ನಡೆದ ಸಂದರ್ಭದಲ್ಲೇ, ಪುಟ್ಟಣ್ಣ ಕಣಗಾಲ್ ನಿರ್ದೇಶನದ ‘ನಾಗರಹಾವು’ ಸಿನಿಮಾ ಮತ್ತೆ ತೆರೆಕಂಡು ಯಶಸ್ವಿ ಪ್ರದರ್ಶನ ಕಂಡಿತು. 1972ರಲ್ಲಿ ತೆರೆಕಂಡು, ವಿಷ್ಣುವರ್ಧನ್‌ರಿಗೆ ತಾರಾಪಟ್ಟವನ್ನೂ ಅಂಬರೀಷ್‌ಗೆ ವಿಶಿಷ್ಟ ಇಮೇಜನ್ನೂ ತಂದುಕೊಟ್ಟಿದ್ದ ‘ನಾಗರಹಾವು’ ನಾಲ್ಕೂವರೆ ದಶಕಗಳ ನಂತರವೂ ಪ್ರೇಕ್ಷಕರನ್ನು ಸೆಳೆದಿದ್ದು ಏನನ್ನು ಸೂಚಿಸುತ್ತದೆ – ನಮ್ಮ ಇಂದಿನ ಚಿತ್ರಗಳ ಗುಣಮಟ್ಟದ ದಾರಿದ್ರ್ಯವನ್ನೋ ಅಥವಾ ರಾಜ್‌ಕುಮಾರ್, ವಿಷ್ಣುವರ್ಧನ್‌ರಂಥ ನಟರ ಸಾರ್ವಕಾಲಿಕ ಜನಪ್ರಿಯತೆಯನ್ನೋ?

2018ರ ಚಿತ್ರರಂಗದ ದುಸ್ಥಿತಿ ಮತ್ತೂ ಸ್ಪಷ್ಟವಾಗಬೇಕಾದರೆ ಕಳೆದ ವರ್ಷದ ಸಿನಿಮಾಗಳನ್ನು ನೋಡಬೇಕು. ಕಳೆದ ವರ್ಷ ಯಶಸ್ಸಿನ ಪ್ರಮಾಣ ಶೇ. 10ರ ಆಸುಪಾಸಿನಲ್ಲಿತ್ತು. ‘ದಯವಿಟ್ಟು ಗಮನಿಸಿ’ (ನಿ: ರೋಹಿತ್ ಪದಕಿ), ‘ಒಂದು ಮೊಟ್ಟೆಯ ಕಥೆ’ (ನಿ: ರಾಜ್ ಶೆಟ್ಟಿ), ‘ಉರ್ವಿ’ (ನಿ: ಪ್ರದೀಪ್ ವರ್ಮ),

